ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು):

(ಅ) ಮೈಸೂರು–ಮಾನಂದವಾಡಿ ರಾಜ್ಯ ಹೆದ್ದಾರಿಯ ದೊಮ್ಮನಕಟ್ಟೆ ಗೇಟ್ ನಿಂದ ಉದ್ದೂರು ಗೇಟ್‌ವರೆಗಿನ 10 ಕಿಮೀ. ಉದ್ದದ ರಸ್ತೆಯಲ್ಲಿ ಅರಣ್ಯ ಇಲಾಖೆಯವರು ವಾಹನ ಸಂಚಾರವನ್ನು ನಿರ್ಭಂದಿಸಿರುವುದರಿಂದ, ಪರ್ಯಾಯವಾಗಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ರಸ್ತೆಯಾದ ದೊಮ್ಮನಕಟ್ಟೆಯಿಂದ ಹೊನ್ನಮ್ಮ ಕಟ್ಟೆ, ನಿಶ್ನೆ–ಎ, ಹೊಸಹೊಳಲು, ಕೆ.ಆರ್.ಪುರ, ಮಗ್ಗೆ ಮಳಲಿ, ಎನ್–ಬೆಳತ್ತೂರು, ಗೆಂಡತ್ತೂರು ಮಾರ್ಗವಾಗಿ ಉದ್ದೂರು ಗೇಟ್ ಬಳಿ ಮೈಸೂರು–ಮಾನಂದವಾಡಿ ಸೇರುವ ರಸ್ತೆ ಮೂಲಕ ಚಲಿಸುತ್ತಿರುವುದರಿಂದ ಸದರಿ ರಸ್ತೆಯಲ್ಲಿ ಗುಂಡಿ ಬಿದ್ದು ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ಪರ್ಯಾಯ ರಸ್ತೆಯು ಗ್ರಾಮೀಣ ರಸ್ತೆಯಾಗಿದ್ದು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯ ವಶದಲ್ಲಿದ್ದು, ಈ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು, ಈ ಸಂಬಂಧ ರಚಿತವಾಗಿರುವ ಪರಿಶೀಲನಾ ಸಮಿತಿ ಮುಂದೆ ಮಂಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಹಾಗೂ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ.18.00 ಕೋಟಿಗಳ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಮೇಲ್ದರ್ಜೆಗೇರಿಸಿದ ಆದೇಶ ಹೊರಡಿಸಿದ ನಂತರ, ಸೂಕ್ತ ಅನುದಾನವನ್ನು ಒದಗಿಸಿ, ರಸ್ತೆ ಅಭಿವೃದ್ಧಿ ಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಕೃಷಿ ಯೋಜನೆಗಳು

246 (614) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರಕ್ಕೆ ಕಳೆದ 3 ವರ್ಷಗಳ ಅವಧಿಯಲ್ಲಿ ಕೃಷಿ ಯಾಂತ್ರೀಕರಣ ಮತ್ತು ಲಘು ನೀರಾವರಿ (Sprinkler) ಯೋಜನೆಯಡಿಯಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಇದೇ ಅವಧಿಯಲ್ಲಿ ಈ ಯೋಜನೆಯ ಲಾಭ ಪಡೆಯಲು ಎಷ್ಟು ಜನ ರೈತರು ತಮ್ಮ ಪಾಲಿನ ಹಣವನ್ನು ಪಾವತಿ ಮಾಡಿ ಅರ್ಜಿ ಸಲ್ಲಿಸಿರುತ್ತಾರೆ;

ಆ) ಈ ಕ್ಷೇತ್ರದಲ್ಲಿ ಈ ಯೋಜನೆಯಡಿ ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೂ ಈ ಯೋಜನೆಯ ಲಾಭ ಪಡೆದುಕೊಳ್ಳಲು ಅನುಕೂಲ ಮಾಡಿಕೊಡಲು ಪ್ರಸಕ್ತ ಸಾಲಿನಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಇ) ಈ ಯೋಜನೆಯ ಲಾಭ ಪಡದುಕೊಳ್ಳಲು ಸುಮಾರು 1500 ಜನ ಫಲಾನುಭವಿಗಳು ಕಾಯುತ್ತಿದ್ದು, ಇವರ ಅರ್ಜಿಗಳನ್ನು ಆದಷ್ಟು ಶೀಘ್ರವಾಗಿ ಮಂಜೂರಾತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಉಮೇಶ್ ವಿ. ಕತ್ತಿ (ಮಾನ್ಯ ಕೃಷಿ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಭಾಲ್ಕಿ ತಾಲ್ಲೂಕಿನಲ್ಲಿ ಕೃಷಿ ಯಾಂತ್ರೀಕರಣ ಹಾಗೂ ಲಘು ನೀರಾವರಿ ಯೋಜನೆಗಳಡಿಯಲ್ಲಿ ಬಿಡುಗಡೆ ಮಾಡಿದ ಅನುದಾನದ ವಿವರ ಹಾಗೂ ರೈತರು ಸಲ್ಲಿಸಿರುವ ಅರ್ಜಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 2011–12ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮದಡಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲು ರೂ.40.14 ಲಕ್ಷ ಮತ್ತು ರಾಷ್ಟ್ರೀಯ ಲಘು ನೀರಾವರಿ ಅಭಿಯಾನ ಕಾರ್ಯಕ್ರಮದಡಿ ಲಘು ನೀರಾವರಿ ಘಟಕಗಳಿಗೆ ಸಹಾಯಧನ ಒದಗಿಸಲು ರೂ.23.44 ಲಕ್ಷ ಅನುದಾನವನ್ನು ಭಾಲ್ಕಿ ತಾಲ್ಲೂಕಿಗೆ ಬಿಡುಗಡೆಯಾಗಿರುತ್ತದೆ. ಅನುದಾನ ಲಭ್ಯತೆ ಹಾಗು ಜೇಷ್ಠತೆ ಆಧಾರದ ಮೇಲೆ ರೈತರಿಗೆ ಸಹಾಯಧನದಡಿ ಒದಗಿಸಲಾಗುತ್ತಿದೆ.

ಇ) ಅನುದಾನ ಲಭ್ಯತೆ ಹಾಗು ಜೇಷ್ಠತೆ ಆಧಾರದ ಮೇಲೆ ರೈತರಿಗೆ ಸಹಾಯಧನ ಒದಗಿಸಲಾಗುತ್ತದೆ.

ಅನುಬಂಧ

ಯೋಜನೆಯ ಹೆಸರು	ವರ್ಷ					
	2009–10		2010–11		2011–12	
	ಅನುದಾನ ಬಿಡುಗಡೆ	ರೈತರ ವಂತಿಕೆಯೊಡನೆ ಸಲ್ಲಿಸಿದ ಅರ್ಜಿಗಳ ಸಂಖ್ಯೆ	ಅನುದಾನ ಬಿಡುಗಡೆ	ರೈತರ ವಂತಿಕೆಯೊಡನೆ ಸಲ್ಲಿಸಿದ ಅರ್ಜಿಗಳ ಸಂಖ್ಯೆ	ಅನುದಾನ ಬಿಡುಗಡೆ	ರೈತರ ವಂತಿಕೆಯೊಡನೆ ಸಲ್ಲಿಸಿದ ಅರ್ಜಿಗಳ ಸಂಖ್ಯೆ
ಕೃಷಿ ಯಾಂತ್ರೀಕರಣ	86.66	361	93.24	307	40.14	0
ಲಘು ನೀರಾವರಿ	166.00	1024	44.91	347	23.44	0